# ಆಲ್ಪ್ಸ್ ಪರ್ವತಗಳು ಹರಸಿದ
# 'ಮಿಟ್ಟೆನ್‌ವಾಲ್ಡ್'



ಮಿಟ್ಟೆನ್‌ವಾಲ್ಡ್



**ಜರ್ಮನಿಯ ಮಿಟ್ಟೆನ್‌ವಾಲ್ಡ್ ಚಾರಣಿಗರ ಹಾಗೂ ಸೌಂದರ್ಯೋಪಾಸಕರ ನೆಚ್ಚಿನ ಒಂದು ಪುಟ್ಟ ಹಳ್ಳಿ. ಋತುವಿಗೆ ತಕ್ಕಂತೆ ಬಣ್ಣ ಬದಲಿಸಿಕೊಳ್ಳುವ ಈ ಗ್ರಾಮದಲ್ಲಿ ಸೌಂದರ್ಯ ಹಾಗೂ ನೆಮ್ಮದಿ ಸೊಂಟ ಮುರಿದುಕೊಂಡು ಬಿದ್ದಂತೆ ಕಾಣಿಸುತ್ತದೆ.**

■ **ಎಸ್.ಪಿ. ವಿಜಯಲಕ್ಷ್ಮಿ**

**ಕಿ**ನ್ನರಲೋಕ, ಗಂಧರ್ವಲೋಕ ಇವೆ ಎನ್ನುತ್ತಾರೆ. ಹೋಗಿ ಬಂದವರಿಲ್ಲ, ವರದಿ ತಂದವರಿಲ್ಲ. ಅವುಗಳ ಅನನ್ಯ ಸೌಂದರ್ಯವನ್ನು ಕನಸಿನಲ್ಲಿ ಕಲ್ಪಿಸಿಕೊಳ್ಳಬಹುದೇನೋ? ಆದರೆ, ಸುರಸೌಂದರ್ಯ ಕೇವಲ ಕಾಲ್ಪನಿಕವಲ್ಲ, ಅದು ಮೂರ್ತರೂಪವೂ ಹೌದು ಎನ್ನಿಸಿದ್ದು 'ಮಿಟ್ಟೆನ್‌ವಾಲ್ಡ್' ಎನ್ನುವ ಜರ್ಮನಿಯ ಹಳ್ಳಿಯೊಂದನ್ನು ನೋಡಿದ ಮೇಲೆ.

ಜರ್ಮನಿಯ 'ಬವೇರಿಯಾ' ರಾಜ್ಯ ಪ್ರಾಕೃತಿಕ ಸೌಂದರ್ಯಕ್ಕೆ ಪ್ರಸಿದ್ಧ. 'ಆಲ್ಪ್ಸ್' ಪರ್ವತಶ್ರೇಣಿಯು ಸಾಲುಸಾಲಾಗಿ ಮೈಚಾಚಿ ಮಲಗಿರುವ ಭೂಸ್ವರ್ಗವಿದು. ಬೇಸಿಗೆಯಲ್ಲಿ ಇಲ್ಲಿ ಹಚ್ಚಹಸಿರು, ಬಣ್ಣಬಣ್ಣದ ಹೂಗಳ ರಾಶಿ ಹಾಗೂ ನೀಲ ಸರೋವರಗಳಿಂದ ಪ್ರಕೃತಿಯ ಸೌಂದರ್ಯ ನೋಡುಗರನ್ನು ಹುಚ್ಚೆಬ್ಬಿಸುವಷ್ಟು ಮೋಹಕವಾಗಿರುತ್ತದೆ. ಚಳಿಗಾಲದಲ್ಲಿ ಬೆಣ್ಣೆ ಬಿಳುಪಿನ ಹಿಮ ಸುರಿದು ಧವಳಲೋಕವೊಂದು ಅನಾವರಣಗೊಂಡು ಬಿಡುತ್ತದೆ. ಅದರಲ್ಲೂ ಬವೇರಿಯಾದ ಹಳ್ಳಿಗಳಿವೆಯಲ್ಲ – ಅವುಗಳ ಸೌಂದರ್ಯ ವರ್ಣನಾತೀತ.

### ಸೌಂದರ್ಯದ ಸಾಕ್ಷಾತ್ಕಾರ

ಮ್ಯೂನಿಕ್‌ನಿಂದ ಕೇವಲ ಮಿಟ್ಟೆನ್‌ವಾಲ್ಡ್‌ಗೆ ಎರಡು ತಾಸುಗಳ ರಸ್ತೆಯ ಪಯಣ. ಆದರೆ, ದಾರಿಯುದ್ದಕ್ಕೂ ಮನಸೆಳೆಯುವ ರಸ್ತೆಯ ಎರಡೂ ಬದಿಗಳಲ್ಲಿ ಆಲ್ಪ್ಸ್ ಪರ್ವತಗಳು, ಹಚ್ಚಹಸಿರಿನ ಇಳಿಜಾರುಗಳು, ಸೆಡಾರ್–ಪೈನ್ ಮರಗಳ ದಟ್ಟಕಾಡು, ಪುಟ್ಟಹಳ್ಳಿಗಳ ಕಿನ್ನರಲೋಕ – ಇವೆಲ್ಲವೂ ಸೇರಿಕೊಂಡು ಪಯಣದ ಅವಧಿಯನ್ನು ನಮಗೆ ತಿಳಿಯದಂತೆಯೇ ಹೆಚ್ಚಿಸಿಬಿಡುತ್ತವೆ.

ಗಮ್ಯ ತಲುಪಿದ ನಾವು ಮೊದಲು ಹೋಗಿದ್ದು ಕಾರ್ವೆಂಡಲ್ ಪರ್ವತಗಳಲ್ಲಿನ ಚಾರಣಕ್ಕೆ. ಮಿಟ್ಟೆನ್‌ವಾಲ್ಡಿಗೆ ಬರುವವರಲ್ಲಿ ಹೆಚ್ಚಿನ ಮಂದಿಯ ಮೊದಲ ಗುರಿ ಈ ಕಾರ್ವೆಂಡೆಲ್ ಚಾರಣ. ಇಲ್ಲಿಯ ಬೇಸಿಗೆಯ ದಿನಗಳ ಸೌಂದರ್ಯದ, ಹಿಮ ಸುರಿದಾಗಿನ ಅನುಭವ ಇನ್ನೂ ಅದ್ಭುತ. ಪೂರ್ಣ ಪ್ರದೇಶ ಹಿಮದಲ್ಲಿ ಮುಚ್ಚಿ ಧವಳಗಿರಿಯಾದಾಗ ಚಾರಣ ಬಹಳ ಕಠಿಣ. ಇಲ್ಲಿನವರಿಗೆ ಈ ಪ್ರಾಕೃತಿಕ ವಿರೋಧಾಭಾಸಗಳು ಬದುಕಿನ ಭಾಗವೇ.